# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1073.
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ).
3. ಉತ್ತರಿಸಬೇಕಾದ ದಿನಾಂಕ : 28/12/2022.
4. ಉತ್ತರಿಸುವ ಸಚಿವರು : ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಶಿವಮೊಗ್ಗ ನಾಗರೀಕ ವಿಮಾನ ನಿಲ್ದಾಣ ಕಾಮಗಾರಿಯನ್ನು ಯಾವ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲಾಯಿತು; ವಿಸ್ತೃತ ಯೋಜನಾ ವರದಿಯಂತೆ ಈ ಕಾಮಗಾರಿಯ ಯೋಜನಾ ಅಂದಾಜು ಮೊತ್ತವೆಷ್ಟು; | ಶಿವಮೊಗ್ಗ ನಾಗರೀಕ ವಿಮಾನ ನಿಲ್ದಾಣ ಕಾಮಗಾರಿಯನ್ನು 2020-21 ರಿಂದ ಪ್ರಾರಂಭಿಸಲಾಯಿತು. ವಿಸ್ತೃತ ಯೋಜನಾ ವರದಿಯಂತೆ ಈ ಕಾಮಗಾರಿಯ ಯೋಜನಾ ಅಂದಾಜು ಮೊತ್ತ ರೂ 449.22 ಕೋಟಿಗಳಾಗಿರುತ್ತದೆ. |
| (ಆ) | ಕಾಮಗಾರಿಯನ್ನು ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ; ಪ್ರಸ್ತುತ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ; ಈವರೆಗೆ ಗುತ್ತಿಗೆದಾರು ಸಂಸ್ಥೆಗೆ ಪಾವತಿಸಲಾದ ಮೊತ್ತವೆಷ್ಟು; ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು) | ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮುಖಾಂತರ ನಿರ್ವಹಿಸಲಾಗುತ್ತದೆ. ಸದರಿ ವಿಮಾನ ನಿಲ್ದಾಣದ ಪ್ಯಾಕೇಜ್ – 1ರ ಕಾಮಗಾರಿಯ ಭೌತಿಕ ಪ್ರಗತಿಯು ಶೇಕಡ 92 ರಷ್ಟು ಮತ್ತು ಪ್ಯಾಕೇಜ್-2 ಕಾಮಗಾರಿಯ ಭೌತಿಕ ಪ್ರಗತಿಯು ಶೇಕಡ 79.50 ರಷ್ಟು ಪೂರ್ಣಗೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br><br>ಪ್ರಸ್ತುತದವರೆವಿಗೂ ಸದರಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ 402.61 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ಗುತ್ತಿಗೆದಾರರಿಗೆ ರೂ 385.92 ಕೋಟಿ ಹಾಗೂ ಜಿಲ್ಲಾಧಿಕಾರಿ ಶಿವಮೊಗ್ಗ ಇವರಿಗೆ ರೂ.16.69 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಬಾಕಿ ರೂ.46.61 ಕೋಟಿಗಳನ್ನು ಪಾವತಿಸಬೇಕಾಗಿರುತ್ತದೆ. |
| (ಇ) | ಈ ಯೋಜನೆಯ ಯೋಜನಾ ಅಂದಾಜು ವೆಚ್ಚವನ್ನು ಕಾಲಾನುಕ್ರಮದಲ್ಲಿ ಪರಿಷ್ಕರಿಸಲಾಗಿದೆಯೇ; (ಪರಿಷ್ಕರಣೆಯ ಸಂಪೂರ್ಣ ವಿವರ ನೀಡುವುದು) | ಹೌದು.<br>ಪರಿಷ್ಕರಣೆಯ ವಿವರಗಳು ಈ ಕೆಳಕಂಡಂತಿವೆ. |

| ಸರ್ಕಾರದ ಆದೇಶ ಸಂಖ್ಯೆ | ಅನುಮೋದನೆ ಮೊತ್ತ ರೂ ಕೋಟಿಗಳಲ್ಲಿ | ಪರಿಷ್ಕೃತ ಮೊತ್ತ ರೂ ಕೋಟಿಗಳಲ್ಲಿ |
|---|---|---|
| ಐಡಿಡಿ 60 ಡಿಐಎ 2018, ದಿ:06.02.2020 | 220.00 | |
| ಐಡಿಡಿ 60 ಡಿಐಎ 2018, ದಿ:05.12.2020 | 220.00 | 384.00 |
| ಐಡಿಡಿ 152 ಡಿಐಎ 2020, ದಿ:16.07.2022. | 384.00 | 449.22 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಈ) | ಯೋಜನಾ ಪ್ರದೇಶದಲ್ಲಿ ಈ ಮೊದಲಿದ್ದ ಹೈಟೆನ್ಷನ್ ವಿದ್ಯುತ್ ತಂತಿಯನ್ನು ಯಾವ ರೀತಿ ಸ್ಥಳಾಂತರಿಸಲಾಗಿದೆ; ಸ್ಥಳಾಂತರಿಸಲು | ಈ ಸಂಬಂಧ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಮಾಹಿತಿ ಪಡೆಯಲಾಗಿದ್ದು, ಶಿವಮೊಗ್ಗ ವಿಮಾನ ನಿಲ್ದಾಣ ಯೋಜನಾ |

| | | |
|---|---|---|
| | ಭರಿಸಿದ ಮೊತ್ತವೆಷ್ಟು; ಯಾವ ಸಂಸ್ಥೆಯ ಮೂಲಕ ನಿರ್ವಹಿಸಲಾಗಿದೆ; ಗುತ್ತಿಗೆದಾರರು ಸಂಸ್ಥೆಗೆ ಪಾವತಿಸಿದ ಹಾಗೂ ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು? | ಪ್ರದೇಶದಲ್ಲಿ ಈ ಮೊದಲಿದ್ದ ಹೈಟೆನ್ಶನ್ ವಿದ್ಯುತ್ ತಂತಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಸ್ಥಳಾಂತರಿಸಲಾಗುತ್ತಿದ್ದು, ಉದ್ದೇಶಿತ ವಿಮಾನ ನಿಲ್ದಾಣದ ಸಮೀಪ 220 ಕೆ.ವಿ. ಶಿವಮೊಗ್ಗ - ಮೈಸೂರು ಡಿಸಿ ವಿದ್ಯುತ್ ಮಾರ್ಗದಲ್ಲಿನ 3 ಸಂಖ್ಯೆ ಗೋಪುರಗಳ ಎತ್ತರವನ್ನು ತಗ್ಗಿಸುವುದು ಹಾಗೂ 66 ಕೆ.ವಿ. ಭದ್ರಾ-I & 2 ಓವರ್ ಹೆಡ್ ವಿದ್ಯುತ್ ಮಾರ್ಗವನ್ನು 630 ಚ.ಮೀ. ಎಕ್ಸ್.ಎಲ್.ಪಿ.ಇ ಯು.ಜಿ. ಕೇಬಲ್ ಉಪಯೋಗಿಸಿ ಸಂತೇಕಡೂರಿನಿಂದ ಕಾಚಿನಕಟ್ಟೆ ಗ್ರಾಮದವರೆಗೆ 2.446 ಕಿ.ಮೀಗಳ ಉದ್ದಕ್ಕೆ ಭೂಗತ ಕೇಬಲ್ ವಿದ್ಯುತ್ ಮಾರ್ಗವನ್ನಾಗಿ ಬದಲಾಯಿಸುವುದು ಮತ್ತು 66 ಕೆ.ವಿ. ಸಂತೇ ಕಡೂರು ಉಪ ಕೇಂದ್ರದಲ್ಲಿ 3 ಸಂಖ್ಯೆಯ 66 ಕೆ.ವಿ. ಟರ್ಮಿನಲ್-ಬೇ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>ಕವಿಪ್ರನಿನಿ ವತಿಯಿಂದ ಸ್ಥಳಾಂತರಿಸಲು ಕಾರ್ಯ ಪ್ರೇಷಣೆಯ ಮೊತ್ತ ರೂ.3022.42 ಲಕ್ಷಗಳು. ಈ ಕಾಮಗಾರಿಯನ್ನು ಕವಿಪ್ರನಿನಿ ವತಿಯಿಂದ ಮೆ\|\| ಮಹಾವೀರ ಎಲೆಕ್ಟ್ರೋ-ಮೆಕ್, ಬೆಂಗಳೂರು ರವರಿಗೆ ಕಾರ್ಯಪ್ರೇಷಣೆಯನ್ನು ನೀಡಲಾಗಿದ್ದು ಕಾಮಗಾರಿಯು ಪ್ರಗತಿಯಲಿದ್ದು, ಮುಕ್ತಾಯದ ಹಂತದಲ್ಲಿರುತ್ತದೆ.<br><br>ಈ ಯೋಜನೆಗಾಗಿ ಕವಿಪ್ರನಿನಿ ವತಿಯಿಂದ ಗುತ್ತಿಗೆದಾರರಾದ ಮೆ\|\| ಮಹಾವೀರ ಎಲೆಕ್ಟ್ರೋ-ಮೆಕ್, ಬೆಂಗಳೂರು ರವರಿಗೆ ಇದುವರೆಗೂ ರೂ.2312.18 ಲಕ್ಷಗಳನ್ನು ಪಾವತಿಸಲಾಗಿದೆ. ಹಾಗೂ ರೂ.710.24 ಲಕ್ಷಗಳು ಬಾಕಿ ಇರುತ್ತದೆ. |

ಸಂಖ್ಯೆ:ಮೂಅಇ 205 ರಾಅವಿ 2022

**(ವಿ. ಸೋಮಣ್ಣ)**
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ,
ಸಚಿವರು